ಚಿಕ್ಕಬಳ್ಳಾಪುರ ಸಬ್ ಡಿವಿಜ್ ಆಫಿಸರವರಿಂದ

ತಾರೀಖು 29ನೇ ಮಾಹೆ ಫಿಬ್ರವರಿ ಸ್ ೧೮೯೬ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ,—ಚಿಕ್ಕ ಬಳ್ಳಾಪುರ ತಾಲ್ಲೂಕು ಪೂರ್ಣಸಾಗರ ಹೋಬಳಿ ಯರ್ರಮೂ
ರೇನಹಳ್ಳಿ ಮಜರೆ ನಾರೇನಹಳ್ಳಿ ಯಂಬ ಪೇ

1ನೇ ಸಾಲಿಗೆ	ಕಂದಾಯ	..	15—12—0	ಚಿರಾಖ್ ಗ್ರಾಮದಲ್ಲಿ ಬಂಜರಿನಲ್ಲಿ ಇರುವ
2ನೇ ಡಿಟೋ	ಡಿಟೋ	..	31— 8—0	ಇನಾಂ ಶಿವಾಯಿ ಖ್ ಸರ್ಕಾರಿ ಬಾಬತು
3ನೇ ಡಿಟೋ	ಡಿಟೋ	..	47— 4—0	ಖ್ಷೀ—ಖೆಗೆ ಆಕಾರ 155—12—0 ರೂ
4ನೇ ಡಿಟೋ	ಡಿಟೋ	..	63— 0—0	ಪಾಯಿವುಳ್ಳ ಸಾಗುವಳಿ ಲಾಯಖ್ ವಿಶಿಷ್ಟ
5ನೇ ಡಿಟೋ	ಡಿಟೋ	..	78—12—0	ಜಮ್ರ್ಗಳನ್ನೂ ಬಾಜೂದಲ್ಲಿ ಕಾಣಿಕಿ ಇರುವ
6ನೇ ಡಿಟೋ	ಡಿಟೋ	..	94— 8—0	ಅಳವೆ ಕಂದಾಯದ ಮೇಲೆ ಸಾಗುವಳಿಗೆ
7ನೇ ಡಿಟೋ	ಡಿಟೋ	..	110— 4—0	ಕೊಡಿಸಬೇಕೆಂತಲೂ ಸದರೀ ಜಮೀನಿಗೆ ಆ
8ನೇ ಡಿಟೋ	ಡಿಟೋ	..	126— 0—0	ಧಾರವಾಗಿರುವ ತಿಕಸ್ತು ಕಲ್ಲುಭೂಮಿ ಮೂರು
9ನೇ ಡಿಟೋ	ಡಿಟೋ	..	141—12—0	ಕುಂಟೆ ವಂದು ಸಹ ದುರಸ್ತು ಮಾಡಿಕೊಂಡು
10ನೇ ಡಿಟೋ	ಡಿಟೋ	..	155—12—0	ತರೀ ಬಾಗಾಯತು ಜಮ್ರ್ಗಳಿಗೆ ನೀರುಕ

ಟ್ಟಿಕೊಳ್ಳುತ್ತಾ ಖುಷ್ಕೀ ಜಮೀನಿಗೆ ನೀರು ಕಟ್ಟಿಕೊಂಡರೆ ನೀರು ಸರದಿ ಕೊಡುವದಲ್ಲದೆ ಭಾವಿ ಕುಂಟೆ ಹಕ್ಕು ಸರಕಾರಕ್ಕೆ ವುಳಸಿಕೊಳ್ಳಬಹುದೆಂತಲೂ ಇದು ಬೇಚರಾಖ್ ಗ್ರಾಮ ಆಬಾದಿಗೆ ತರಬೇಕಾದ್ದರಿಂದ ಈ ನಂಬರ್‌ಗಳಲ್ಲಿ ಇರತಕ್ಕ ಮಾಲ್ಕಿ ಸ್ವತ್ತು ಪೈಕಿ ಹತ್ತು ಮನೆಗಳಿಗೆ ತಕ್ಕಷ್ಟು ಮುಫತ್ತು ಬಿಟ್ಟು ಬಾಕಿ ಮಾಲ್ಕಿ ಸ್ವತ್ತಿಗೆ ಕಿಮ್ಮತ್ತು ಕಟ್ಟಿಸಿ ಕೊಡಬೇಕೆಂತಲೂ ಅವನ್ನು ವಡನೇ ಕೊಡುವದಾಗಿಯೂ ಸದರೀ ಹತ್ತು ಸಾಲ್ ಅಳವೆ ಕಾಲದಲ್ಲಿ ದರ ಸಾಲ್ 10ನೇ ವಂದು ಭಾಗದ ಮೇರೆಗೆ ಅಳವೆ ಆಬ್ಕೈರ್ ವಾಯಿದೆ ವಳಗೆ ಪೂರಾ ಜಮ್ರ್ಗೆ ಕಿರ್ದಿಗೆ ತಂದು ಸಾಗುವಳಿ ಮಾಡುವದಾಗಿಯೂ ತಪ್ಪಿದರೆ ಸದರೀ ಜಮ್ರ್ಗಳಿಗೆ ಮುದ್ದೂ ಸಾಲ್ ಲಾಗಾಯತು ಸರಕಾರಕ್ಕೆ ಭರ ಆಕಾರ ಕೊಡುವದಾಗಿಯೂ ಈ ಷರತ್ತುಗಳ ಮೇಲೆ ಸಾಗುವಳಿಗೆ ಕೊಡಿಸಬೇಕೆಂದು ಗೋರೀಬಿದನೂರು ತಾಲ್ಲೂಕು ಅರಸಾಲ್ ಬಂಡೆ ವುರಫ್ ಮಾವಿನಕಾಯಿನಹಳ್ಳಿ ನರಸಿಂಗಪ್ಪನ ಮಗ ತಿಮಪ್ಪನೆಂಬುವನು ದರಖಾಸ್ತು ಕೊಟ್ಟು ಇರುತ್ತಾನೆ, ಆದ್ದರಿಂದ ದರಖಾಸ್ತು ಮಾಡಲ್ಪಟ್ಟ ಜಮ್ರ್ಗಳನ್ನು ಭರ ಆಕಾರದ ಮೇಲಾಗಲಿ ಅಥವಾ ಮೇಲ್ಕಂಡ ದರಖಾಸ್ತು ನಮೂದಿಸುವ ಅಳವೆ ಕಾಲ ಮತ್ತು ಷರತ್ತುಗಳಿಗಿಂತಲೂ ಕಮ್ಮಿ ಆದ ಕಾಲ ವ ಷರತ್ತುಗಳ ಮೇಲಾಗಲಿ ಅಥವಾ ಸರಕಾರಕ್ಕೆ ಲಾಭಕರವಾದ ಇತರ ಷರತ್ತು ವಗೈರೆ ಮೇಲಾಗಲಿ ದರಖಾಸ್ತು ಮಾಡಲಪೇಕ್ಷೆ ವುಳ್ಳವರು ಈ ತಾರೀಖು ಲಾಗಾಯತು 3 ತಿಂಗಳ ವಳಗೆ ದರಖಾಸ್ತು ಕೊಡಬಹುದು. ಆ ಪ್ರಕಾರ ದರಖಾಸ್ತುಗಳು ಬಾರದೆ ಇದ್ದಲ್ಲಿ ಲ್ಯಾಂಡ್ ರೆವಿನ್ಯೂ ರೂಲ್ಸ್, 20ನೇ ಕಲಂ 18ನೇ ಪ್ಯಾರಾ ಪ್ರಕಾರ ಯುಕ್ತಕಂಡ ರೀತಿ ವೆವಸ್ಥೆ ಮಾಡಲಾಧೀತು.

ಬಿ. ಜಿ. ಕೃಷ್ಣಯ್ಯಂಗಾರ್,
ಸಬ್ ಡಿವಿಜ್ ಆಫಿಸರ್.

ಫಾರೆಸ್ಟ್ ಇಲಾಖೆ

ತುಮಕೂರು ಡಿಸ್ಟ್ರಿಕ್ಟ್.

ತಾರೀಖು 16ನೇ ಮಾರ್ಚ್ 1896ನೇ ಇಸವಿ.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ;—ಸರ್ಕಾರ ತರ್ಫಿನಿಂದ ತುಮಕೂರು ಡಿಸ್ಟ್ರಿಕ್ಟ್ ದೇವರಾಯದುರ್ಗ, ಮದ್ದಗಿರಿ, ಕುದುರೆಕಣವೆ, ಹುಲಿಯೂರದುರ್ಗ, ಬುಕ್ಕಾಪಟ್ಟಣದ ಫಾರೆಸ್ಟ್‌ಗಳಲ್ಲಿ ಜವಾಯಿಸಲ್ಪಟ್ಟ 1895—96ನೇ ಸಾಲ್ ಪಸಾರೆ ಜಿನಸುಗಳು ವಗೈರೆ ಈ ಕೆಳಗೆ ನಮೂದಾಗುವ ತಾರೀಖು ಮತ್ತು ಸ್ಥಳಗಳಲ್ಲಿ ಹರಾಜು ಮಾಡಲ್ಪಡುತ್ತೆ.

1896ನೇ ಇಸವಿ ಏಪ್ರೆಲ್ 14ರಲ್ಲು ಹುಲಿಯೂರದುರ್ಗದ ತಾಲ್ಲೂಕು ಕಚೇರಿಯಲ್ಲಿ.

ನಂಬರ್.	ಜಿನಸಿ ತಪಶೀಲ್.	ಪಲ್ಲ.	ಮಣ.	ಕೇರು.	ಷರಾ.
1	ಅಳಲೇಕಾಯಿ	..	229	..	ಸರಾಸರಿ
2	ಹೊಂಗೇಬೀಜ	1	..	..	ಡಿಟೋ
3	ಸೀಗೇಕಾಯಿ	..	20	..	ಡಿಟೋ
4	ಹುಣಸೇಹಣ್ಣು	..	10	..	ಡಿಟೋ

1896ನೇ ಇಸವಿ ಏಪ್ರಿಲ್ 17ರಲ್ಲು ತುಮಕೂರ ಡಿಪೋದಲ್ಲಿ.

ನಂಬರ್.	ಜಿನಸು ತಪಶೀಲ್.	ಪಲ್ಲ.	ಮಣ.	ಶೇರು.	ಷರಾ.
1	ಅಳಲೇಕಾಯಿ	..	100	..	ಡಿಟೋ
2	ಗೇರುಬೀಜ (Marking nut) ..	1	..	..	ಡಿಟೋ
3	ಹೊಂಗೇಕಾಯಿ ..	10	..	..	ಡಿಟೋ
4	ಸೀಗೇಕಾಯಿ ..	..	85	..	ಡಿಟೋ
5	ಲಾಕ (ಅರಗು) ..	..	2	..	ಡಿಟೋ
6	ಹುಣಸೇ ಹಂಣು ..	..	100	..	ಡಿಟೋ
7	ಕಪಿಲಾರಂಗು ..	..	1	14	ಡಿಟೋ
8	ಕ್ಯಾಸು ಅರೀನತೀರು ..	ನಂಬರ್ 24	ಸಲೆ 51-3-3	..	ಡಿಟೋ

1896ನೇ ಇಸವಿ ಏಪ್ರಿಲ್ 20ರಲ್ಲು ಮದ್ದಗಿರಿ ಡಿಪೋದಲ್ಲಿ.

1	ಅಳಲೇಕಾಯಿ ..	..	700	..	ಡಿಟೋ
2	ಗೇರುಬೀಜ ..	3	..	..	ಡಿಟೋ
3	ಹೊಂಗೇಕಾಯಿ ..	..	..	50	ಡಿಟೋ
4	ಹುಣಸೇಹಂಣು ..	..	10	..	ಡಿಟೋ
5	ತ್ಯಾಗದ ತೀರು ..	ನಂಬರ್ 124	ಸ|| 118-11-3	..	ಡಿಟೋ
6	ಹುಲ್‌ವೇ ..	1	8	..	ಡಿಟೋ

1896ನೇ ಇಸವಿ ಏಪ್ರಿಲ್ 22ರಲ್ಲು ಕಿರಾ ಮುಸಾಫರ್ ಬಂಗ್ಲಾದಲ್ಲಿ.

1	ಅಳಲೇಕಾಯಿ ..	..	770	..	ಡಿಟೋ
2	ಹುಣಸೇಹಂಣು ..	..	6	..	ಡಿಟೋ
3	ಕುದರೆಕಣಿವೆ ಸ್ಟೇಟ್ ಫಾರೆಸ್ಟ್ ಬಾಬತು ಅಳಲೇಕಾಯಿ	..	67	..	ಡಿಟೋ

ಮೊಬಲಗು ಪಾವತಿ ಯಾ ಹರಾಜು ತಾರೀಖು ಲಾಗಾಯತು ಕಾವಲ್ ಕಟ್ಟಳೆ ಹರಾಜುದಾರ್‌ಗೇನೇ ಸಂಬಂಧಪಡುತ್ತೆ.

ಪರತ್ತು.—ಕೇಕಡಾ 25 ರೂಪಾಯಿನಂತೆ ಡಿಪಾಜಿಟ್ ಮೊಬಲಗು ತಕ್ಷಣ ಕಟ್ಟಬೇಕು. ಬಾಕಿ ಮೊಬಲಗು ಹರಾಜ್ ತಾರೀಖು ಲಾಗಾಯತು ವಂದು ವಾರದೊಳಗಾಗಿ ಪಾವತಿ ಮಾಡಬೇಕು, ತಪ್ಪಿದರೆ ಬಾಬನ್ನ ಪುನಹ ಹರಾಜ್ ಮಾಡಲ್ಪಡುತ್ತೆ. ಲುಕಸಾನಿಗೆ ಮೊದಲ್ ಹರಾಜುದಾರನ್ನ ಗುರಿಮಾಡುತ್ತೆ. ಸಾಮಾನುಗಳು ಹರಾಜು ತಾರೀಖು ಲಾಗಾಯತು 10 ದಿವಸಗಳ ವಳಗಾಗಿ ಸಾಗಿಸಿಕೊಳ್ಳಲ್ಪಡಬೇಕು. ಇವುಗಳ ಶಿವಾಯಿ ಇತರ ತಪಶೀಲ್‌ಗಳಿಗೆ 1887ನೇ ಇಸವಿ ಸೆಪ್ಟಂಬರ್ 3ನೇ ಮಂಗಳವಾರ 35ನೇ ನಂಬರ್ ಗೆಜೆಟ್ಟಿನ 1ನೇ ಭಾಗದಲ್ಲಿ ಪ್ರಕಟಿಸಿರುವ 1887ನೇ ಇಸವಿ ಆಗಸ್ಟ್ 30ನೇ ಮಂಗಳವಾರ 90ನೇ ನಂಬರ್ ಪ್ರಕಟನೆ ನೋಡಿ.

ಯಂ. ವೆಂಕಟನಾರಣಪ್ಪ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.

ಮೈಸೂರು ಫಾರೆಸ್ಟ್ ಇಲಾಖೆ.

ಇಸ್ತಿಹಾರ್‌ನಾವೆ.

ಕೋಲಾರ್ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ಕಂಡ ಜಂಗಲ್‌ಗಳಲ್ಲಿ ಬಿಡಾರು, ಗಳುವನ್ನು ಕತರಾಯಿಸಿ ಜಮಾಯಿಸಿ ಖರೀದಿಗೆ ತೆಗದುಕೊಳ್ಳತಕ್ಕ ಬಗ್ಗೆ ದರಖಾಸ್ತುಗಳು ಕೋರಲ್ಪಟ್ಟವೆ.—

(1)	ನಂದೀ ಫಾರೆಸ್ಟ್ ..	ತಾಲ್ಲೂಕು ಚಿಕ್ಕಬಳ್ಳಾಪುರ.
(2)	ನರಸಿಂಹದೇವರ ಬೆಟ್ಟದ ಫಾರೆಸ್ಟಿನಲ್ಲಿ II ಎರಡನೇ ಬ್ಲಾಕ ..	ಡಿಟೋ.
(3)	ರಾಯಲ್‌ಪಾಡ್ ಫಾರೆಸ್ಟಿನಲ್ಲಿ ಮುದಿಮಡಗು ಬ್ಲಾಕ ..	ಚಿಂತಾಮಣಿ.
(4)	ನೂಟವೆ ಡಿಸ್ಟ್ರಿಕ್ಟ ಜಂಗಲ್	ಮಾಲೂರ್.

2. ತಮಾಂ ದರಖಾಸ್ತುಗಳನ್ನೂ ಲಕ್ಕೋಟೆಗಳಲ್ಲಿ ಹಾಕಿ ಮೊಹರ್‌ಮಾಡಿ ಕೋಲಾರ್ ಡಿಸ್ಟ್ರಿಕ್ಟ ಫಾರೆಸ್ಟ್ ಆಫಿಸಿಗೆ ರವಾನಿಸಬೇಕಲ್ಲದೆ ಪ್ರತಿ ದರಖಾಸ್ತು ನೊಂದಿಗೂ (50) ರೂಪಾಯಿಗಳನ್ನ ಠೇವಣಿ ಬಗ್ಗಾಗಿ ಕಳುಹಿಸಬೇಕಾಗಿರುತ್ತೆ. ಖಾಲೀ ದರಖಾಸ್ತುಗಳನ್ನ ಹಿಡಿಯುವದಿಲ್ಲ. ಇದೇ ಇಸವಿ ಮೇ ಮಾಹೆ ಆಖೈರ್ ವರಿಗೆ ದರಖಾಸ್ತುಗಳನ್ನು ಬರಮಾಡಿಕೊಂಡು ಜೂ ಗುರ್ರೇ ತಾರೀಖಿನಲ್ಲಿ ಫೈಸಲ್ಮಾಡಲಾಗುತ್ತೆ.

3. ಇದೇ ಇಸವಿ ಜುಲೈ ಗುರ್ರೇ ಲಾಗಾಯತು 97ನೇ ಜೂ ಆಖೈರ್ ವರೆಗೆ ಸಲ್ಲುವ 1896—97ನೇ ಸಾಲ್‌ನಲ್ಲಿ ಯಾವ ಜಂಗ್ಲಿಯಿಂದ ಎಷ್ಟು ಬಿದರುಗಳನ್ನ ಕಡಿದು ತೆಗೆದುಕೊಂಡು ಹೋಗುವದಕ್ಕೆ ಒಪ್ಪುತ್ತಾರೋ ಮತ್ತು (1000) ಒಂದು ಸಾವಿರ ಬೊಂಬುಗಳಿಗೆ ಯಾವ ದರ ಕೊಡುವದಕ್ಕೆ ಕಬೂಲ್ ಇಧಾರೆ ಎಂಬ ಎರಡು ಸಂಗತಿಗಳನ್ನೂ ದರಖಾಸ್ತು ದಾರರು ಸ್ಪಷ್ಟವಾಗಿ ನಮೂದಿಸಬೇಕು. ಹೆಚ್ಚು ದರ ನಮೂದುಳ್ಳ ಅಥವಾ ಇನ್ಯಾವ ದರಖಾಸ್ತನ್ನಾ ದರೂ ಯಾವ ಕಾರಣವನ್ನೂ ಹೇಳದೆ ಇಷ್ಟಬಂದರೆ ಅಂಗೀಕರಿಸುವದಕ್ಕೂ ನಿಂತದ್ದನ್ನ ತಿರಸ್ಕರಿಸುವದಕ್ಕೂ ಸಹ ಪೆಳ್ಳಟ್ ಕಮ್ಮಿಷನರವರು ಮೊಖ್ತ್ಯಾರ್‌ರಾಗಿದ್ದಾರೆ.